

ಕೃತಿಗಳು, ಎರಡು ವಿಮರ್ಶಾ ಕೃತಿಗಳನ್ನು ಬರೆದಿದ್ದಾರೆ. ‘ಮುಕ್ತಿ ವೃತ್ತಾಂತ್’ ಅವರ ಆತ್ಮಕಥೆ. ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೂ ಹಿಮಾಂಶಿ ಗಮನಾರ್ಹ ಕೊಡುಗೆ ನೀಡಿದ್ದಾರೆ.

ಹಿಮಾಂಶಿ ಅವರ ‘ಅಂತರಾಲ್’ ಎಂಬ ಮೊದಲ ಕಥಾಸಂಕಲನ 1987ರಲ್ಲಿ ಪ್ರಕಟವಾದಾಗ, ವಿಭಿನ್ನ ಆಲೋಚನೆಯ ಲೇಖಕಿಯೆಂದು ಓದುಗರು ಮತ್ತು ವಿಮರ್ಶಕರ ಗಮನ ಸೆಳೆದರು. ಹೀಗೆ ಮೊದಲ ಕಥಾ ಸಂಕಲನದಲ್ಲಿ ಗೋಚರಿಸಿದ ಶ್ರದ್ಧೆಯೇ ಅವರು ಪ್ರಕಟಿಸಿದ ಹನ್ನೆರಡೂ ಕಥಾಸಂಕಲನಗಳಲ್ಲೂ ಎದ್ದು ಕಾಣುತ್ತದೆ. ಅವರು ಎಂದೂ ಓದುಗರನ್ನು ನಿರಾಸೆಗೊಳಿಸಿದವರಲ್ಲ. ಗುಣಮಟ್ಟವಾಗಲೀ, ಬರೆಯುವ ನಿರಂತರತೆಯಾಗಲೀ ಸಡಿಲವಾಗಿದ್ದಿಲ್ಲ. ಅವರ ಈ ಶ್ರದ್ಧೆಯೇ ಅವರನ್ನು ಗುಜರಾತಿ ಭಾಷೆಯ ಪ್ರಮುಖ ಲೇಖಕಿಯಾಗಿ ಗುರ್ತಿಸುವಂತೆ ಮಾಡಿದೆ ಎನ್ನಬಹುದು.

ಆತ್ಮೀಯರ ನಡುವೆ ‘ಹಿಮಾಂಶಿ ಬೆನ್’ ಎಂದು ಅಕ್ಕರೆಯಿಂದ ಗುರುತಿಸಲಾಗುವ ಅವರು, ಸಾಹಿತ್ಯ ವಲಯದಲ್ಲಿ ಸ್ವತಂತ್ರವಾದ ತಮ್ಮದೇ ಆದ ಧ್ವನಿಯೊಂದನ್ನು ಕಾಯ್ದುಕೊಂಡು ಬಂದಿದ್ದಾರೆ. ಇತರರ ಅನುಕರಣೆಯಾಗಲೀ, ಪ್ರತಿಧ್ವನಿಯಾಗಲೀ ಆಗದೇ, ಜೀವನಾನುಭವ ಮತ್ತು ಸ್ವಂತ ಅರಿವಿನ ಮೂಲಕ ತಮ್ಮ ಬರವಣಿಗೆಯಲ್ಲಿ ಗಟ್ಟಿಧ್ವನಿಯೊಂದನ್ನು ಪ್ರಕಟಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅವರು ಎತ್ತಿಕೊಳ್ಳುವ ಕಥಾವಸ್ತುಗಳು ನಮ್ಮ ಅಕ್ಕಪಕ್ಕದಲ್ಲೇ ಇರುವಂಥವು. ನಮ್ಮ ಸುತ್ತಮುತ್ತಲೇ ಅರಳುವ ಸಾಮಾನ್ಯ ಘಟನೆಯೊಂದನ್ನು ಕೈಗೆತ್ತಿಕೊಂಡು ಕಥೆಗಳ ರೂಪ ನೀಡುತ್ತಾರೆ. ಸೈದ್ಧಾಂತಿಕ ಒತ್ತಡಗಳಿಗೆ